# ಮಂಗಳೂರು ವಿಶ್ವವಿದ್ಯಾನಿಲಯ

ದಿನಾಂಕ 24.08.2023ರಂದು ಪೂರ್ವಾಹ್ನ ಗಂಟೆ 10.00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2023ನೇ ಸಾಲಿನ ಐದನೆಯ ಸಾಮಾನ್ಯ ಸಭೆಯ ನಡವಳಿಗಳು.

**ಉಪಸ್ಥಿತರು:**

| **ಕ್ರ.ಸಂ.** | | | **ಸಹಿ** |
|---|---|---|---|
| 1. | ಪ್ರೊ. ಜಯರಾಜ್ ಅಮೀನ್<br>ಕುಲಪತಿಗಳು | ಅಧ್ಯಕ್ಷರು | |
| 2. | ಡಾ. ರಾಮೇಗೌಡ ಎಂ.,<br>ಜಂಟಿ ನಿರ್ದೇಶಕರು<br>(ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು | |
| 3. | ಡಾ. ಎಸ್. ಬಿ. ಎಂ. ಪ್ರಸನ್ನ | ಸದಸ್ಯರು | |
| 4. | ಡಾ. ಕೆ. ಸಿ. ಮಹದೇಶ | ಸದಸ್ಯರು | |
| 5. | ಪ್ರೊ. ಜಯರಾಜ್ ಅಮೀನ್<br>ಡೀನರು, ಕಲಾ ನಿಕಾಯ | ಸದಸ್ಯರು | |
| 6. | ಶ್ರೀ ಕೃಷ್ಣಪ್ರಸಾದ್ ಕೆ. ಎನ್. | ಸದಸ್ಯರು | |
| 7. | ಡಾ. ರಾಜೇಂದ್ರ ಎಸ್. ನಾಯಕ್ | ಸದಸ್ಯರು | |
| 8. | ಶ್ರೀಮತಿ ಸಮೀರ ಕೆ. ಎ. | ಸದಸ್ಯರು | |
| 9. | ಶ್ರೀ ಎಚ್. ತ್ರಿಲೋಕನಾಥ್ | ಸದಸ್ಯರು | |
| 10. | ಡಾ. ಸಿಪ್ರಿಯನ್ ಮೊಂತೇರೋ<br>ಪ್ರಾಂಶುಪಾಲರು, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ,<br>ಸಾರ್ವಜನಿಕ ಶಿಕ್ಷಣ ಆಯುಕ್ತರ ಪರವಾಗಿ | ಸದಸ್ಯರು | |
| 11. | ಪ್ರೊ. ರಾಜುಕೃಷ್ಣ ಚಲಣ್ಣವರ್<br>ಕುಲಸಚಿವರು (ಪರೀಕ್ಷಾಂಗ) | ಸದಸ್ಯರು | |
| 12. | ಪ್ರೊ. ವೈ. ಸಂಗಪ್ಪ<br>ಹಣಕಾಸು ಅಧಿಕಾರಿ (ಪ್ರಭಾರ) | ವಿಶೇಷ<br>ಆಹ್ವಾನಿತರು | |
| 13. | ಪ್ರೊ. ರಾಜುಕೃಷ್ಣ ಚಲಣ್ಣವರ್<br>ಕುಲಸಚಿವರು (ಆಡಳಿತ) (ಪ್ರಭಾರ) | ಸದಸ್ಯ<br>ಕಾರ್ಯದರ್ಶಿ | |

## ಪ್ರಾರಂಭಿಕ

ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

- **ಸ್ವಾಗತ:**

1. ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 257 ಆಸೇವ 2023 ದಿನಾಂಕ 01.08.2023 ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರಾಗಿದ್ದ ಶ್ರೀ ಮೊಹಮ್ಮದ್ ನಯೀಮ್ ಮೊಮಿನ್, ಕೆ.ಎ.ಎಸ್. ಇವರನ್ನು ಯಲಹಂಕ ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಇಲ್ಲಿಗೆ ವರ್ಗಾವಣೆಗೊಳಿಸಿರುವುದರಿಂದ ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರು (ಪರೀಕ್ಷಾಂಗ) ಆಗಿರುವ ಪ್ರೊ. ರಾಜುಕೃಷ್ಣ ಚಲಣ್ಣವರ್ ಇವರಿಗೆ ಕುಲಸಚಿವರು (ಆಡಳಿತ) ಹುದ್ದೆಯ ಪ್ರಭಾರವನ್ನು ನೀಡಿರುವ ವಿಚಾರವನ್ನು ಮಾನ್ಯ ಕುಲಪತಿಗಳು ಸಭೆಗೆ ತಿಳಿಸುತ್ತಾ, ಸದರಿಯವರನ್ನು ಸಭೆಗೆ ಸ್ವಾಗತಿಸಿದರು.

- **ಕೃತಜ್ಞತೆ:**

I. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 17 ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರಾಗಿ ದಿನಾಂಕ 21.04.2021ರಿಂದ ಅಧಿಕಾರ ವಹಿಸಿಕೊಂಡಿದ್ದ ಪ್ರೊ. ಕಿಶೋರ್ ಕುಮಾರ್ ಸಿ. ಕೆ., ಇವರನ್ನು ಸರ್ಕಾರದ ಪತ್ರ ಸಂಖ್ಯೆ ಸಿಆಸುಇ 237 ಆಸೇವ 2023 ದಿನಾಂಕ 17.07.2023ರಂತೆ ದಿನಾಂಕ 25.07.2023ರಂದು ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿರುವ ವಿಷಯವನ್ನು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.

II. ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 237 ಆಸೇವ 2023 ದಿನಾಂಕ 17.07.2023ರಂತೆ ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರಾಗಿ ಶ್ರೀ ಮೊಹಮ್ಮದ್ ನಯೀಮ್ ಮೊಮಿನ್, ಕೆ.ಎ.ಎಸ್. ಇವರು ದಿನಾಂಕ 25.07.2023ರಂದು ಅಧಿಕಾರ ವಹಿಸಿಕೊಂಡಿದ್ದು, ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 257 ಆಸೇವ 2023 ದಿನಾಂಕ 01.08.2023ರಂತೆ ಸದರಿಯವರನ್ನು ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿರುವ ವಿಚಾರವನ್ನು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.

ಇವರುಗಳು ತಮ್ಮ ಅಧಿಕಾರದ ಅವಧಿಯಲ್ಲಿ ಹಾಗೂ ಸಿಂಡಿಕೇಟಿನ ಸದಸ್ಯ ಕಾರ್ಯದರ್ಶಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಸರ್ವತೋಮುಖ ಪ್ರಗತಿಗೆ ಹಾಗೂ ಉನ್ನತ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಸಲಹೆ ಮತ್ತು ಸಹಕಾರಗಳನ್ನು ನೀಡಿರುವುದಕ್ಕಾಗಿ ಇವರಿಗೆ ಸಿಂಡಿಕೇಟ್ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಪರವಾಗಿ ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲಾಯಿತು.

➢ **ಸಂತಾಪ:**

I. ದಿನಾಂಕ 05.06.2014 ರಿಂದ 04.06.2018ರ ವರೆಗೆ ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಪ್ರೊ. ಕೆ. ಬೈರಪ್ಪ ಇವರು ದಿನಾಂಕ 31.07.2023ರಂದು ದೈವಾಧೀನರಾಗಿರುತ್ತಾರೆ. ಸದರಿಯವರು ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಅವಧಿಯಲ್ಲಿ ಸಿಂಡಿಕೇಟು ಹಾಗೂ ವಿಶ್ವವಿದ್ಯಾನಿಲಯದ ವಿವಿಧ ಪ್ರಾಧಿಕಾರಗಳ ಅಧ್ಯಕ್ಷರಾಗಿ ವಿಶ್ವವಿದ್ಯಾನಿಲಯದ ಆಡಳಿತ ಮತ್ತು ಶೈಕ್ಷಣಿಕ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದರು.

II. ಪ್ರೊ. ಬಿ. ಉದಯ, ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗ ಇವರು ದಿನಾಂಕ 11.08.2023ರಂದು ದೈವಾಧೀನರಾಗಿರುತ್ತಾರೆ. ಸದರಿಯವರು ದಿನಾಂಕ 02.11.2020 ರಿಂದ 01.11.2021ರ ವರೆಗೆ ಡೀನರ ನೆಲೆಯಲ್ಲಿ ಸಿಂಡಿಕೇಟಿನ ಸದಸ್ಯರಾಗಿದ್ದ ಅವಧಿಯಲ್ಲಿ ಹಾಗೂ ವಿಶ್ವವಿದ್ಯಾನಿಲಯದ ವಿವಿಧ ಸಮಿತಿಗಳಲ್ಲಿ ಅಧ್ಯಕ್ಷರು ಹಾಗೂ ಸದಸ್ಯರಾಗಿ, ಕಲಾ ನಿಕಾಯದ ಡೀನರಾಗಿ ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗದ ಅಧ್ಯಕ್ಷರಾಗಿ, ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಹಾಗೂ ಶೈಕ್ಷಣಿಕ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದರು.

ಇವರುಗಳ ನಿಧನಕ್ಕೆ ಮಂಗಳೂರು ವಿಶ್ವವಿದ್ಯಾನಿಲಯ ಮತ್ತು ವಿಶ್ವವಿದ್ಯಾನಿಲಯದ ಸಿಂಡಿಕೇಟು ಸಭೆಯು ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತಾ, ಅಗಲಿದ ದಿವ್ಯಾತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನು ನೀಡಲೆಂದು ಹಾಗೂ ಇವರುಗಳ ಅಗಲಿಕೆಯ ದುಃಖವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಕುಟುಂಬ ವರ್ಗದವರಿಗೆ ಹಾಗೂ ಶಿಷ್ಯ ವರ್ಗಕ್ಕೆ ನೀಡಲಿ ಎಂದು ಕೋರುವ ಈ ಸಂತಾಪ ಸೂಚಕ ನಿರ್ಣಯವನ್ನು ಸಿಂಡಿಕೇಟು ಸಭೆಯು ಅಂಗೀಕರಿಸಿತು.

**I. ನಡವಳಿಗಳ ದೃಢೀಕರಣ**

1. ದಿನಾಂಕ 14.07.2023ರಂದು ನಡೆದ ಸಿಂಡಿಕೇಟಿನ 2023ನೇ ಸಾಲಿನ ನಾಲ್ಕನೆಯ ಸಾಮಾನ್ಯ ಸಭೆಯ ನಡವಳಿಯ ದೃಢೀಕರಣ.

   - **ದೃಢೀಕರಿಸಲಾಯಿತು.** -

**II. ಅನುಸರಣಾ ವರದಿಯ ಅನುಮೋದನೆ**

1. ದಿನಾಂಕ 14.06.2023ರಂದು ನಡೆದ ಸಿಂಡಿಕೇಟಿನ 2023ನೇ ಸಾಲಿನ ತೃತೀಯ ವಿಶೇಷ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.

   - **ಅನುಮೋದಿಸಲಾಯಿತು**. -

**III. ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು.**

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾ.ಸ.5:1 (2023)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಅರ್ಹ ಸಂಯೋಜಿತ ಕಾಲೇಜುಗಳಿಗೆ ಸ್ವಾಯತ್ತ ಸ್ಥಾನಮಾನ ನೀಡುವುದಕ್ಕೆ ಸಂಬಂಧಿಸಿದಂತೆ ಸ್ಥಾಯಿ ಸಮಿತಿ ರಚನೆ ಬಗ್ಗೆ.

ನಿರ್ಣಯ: ಸಮಿತಿಯನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.5:2 (2023)

ವಿಷಯ: ವಿಶ್ವವಿದ್ಯಾನಿಲಯದ ವಿವಿಧ ಪ್ರಾಧಿಕಾರಗಳ ಸಭೆಗಳಿಗೆ ಒದಗಿಸಲಾಗುವ ಊಟೋಪಹಾರದ ದರಗಳ ಪರಿಷ್ಕರಣೆ ಬಗ್ಗೆ.

ನಿರ್ಣಯ: ವಿಶ್ವವಿದ್ಯಾನಿಲಯದ ವಿವಿಧ ಪ್ರಾಧಿಕಾರಗಳ ಸಭೆಗಳಿಗೆ ಒದಗಿಸಲಾಗುವ ಊಟೋಪಹಾರದ ದರಗಳನ್ನು ಈ ಕೆಳಗಿನಂತೆ ಪರಿಷ್ಕರಣೆ ಮಾಡಲಾಯಿತು.

| ಸಭೆ | ಉಪಾಹಾರ (ಚಾ/ಕಾಫಿ, ತಿಂಡಿ ಇತ್ಯಾದಿ) (ರೂ.)ಗಳಲ್ಲಿ | ಭೋಜನ (ರೂ.)ಗಳಲ್ಲಿ |
|---|---|---|
| ಸಿಂಡಿಕೇಟು | 80.00 | 250.00 |
| ಶೈಕ್ಷಣಿಕ ಮಂಡಳಿ ಹಾಗೂ ಹಣಕಾಸು ಸಮಿತಿ | 80.00 | 200.00 |
| ಅಧ್ಯಯನ ಮಂಡಳಿ/ಪರೀಕ್ಷಕರ ಮಂಡಳಿ/ ಕಟ್ಟಡ ಸಮಿತಿ/ ವ್ಯಾಸಂಗ ವಿಭಾಗಗಳು ಮತ್ತು ವಿಶ್ವವಿದ್ಯಾನಿಲಯದ ವಿವಿಧ ಪ್ರಾಧಿಕಾರಗಳ ಸಮಿತಿ | 80.00 | 200.00 |

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ:ಸಾ.ಸ.5:3 (2023)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಕಸದ ತೊಟ್ಟಿಗಳಲ್ಲಿ ಸಂಗ್ರಹಗೊಂಡ ತ್ಯಾಜ್ಯ ವಿಲೇವಾರಿ ಮಾಡುವ ಬಗ್ಗೆ.

ನಿರ್ಣಯ: ಟೆಂಡರು ಪ್ರಕ್ರಿಯೆ ಅಂತಿಮಗೊಳ್ಳುವವರೆಗೆ ಈ ಹಿಂದಿನ ದರ ಮತ್ತು ಷರತ್ತಿನೊಂದಿಗೆ ಶ್ರೀ ಸುಂದರ್ ಅಂಚನ್, ಗುತ್ತಿಗೆದಾರರು, ಇವರಿಗೆ ತ್ಯಾಜ್ಯ ವಿಲೇವಾರಿ ಮಾಡುವ ಕಾರ್ಯವನ್ನು ವಹಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಾರ್ವತ್ರಿಕ:ಸಾ.ಸ.5:4 (2023)

ವಿಷಯ: World University Games-2023ರ ಅಥ್ಲೇಟಿಕ್ಸ್‌ನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಿಂದ ಆಯ್ಕೆಗೊಂಡ ಕ್ರೀಡಾಪಟುಗಳ ಭಾಗವಹಿಸುವಿಕೆಯ ಖರ್ಚುವೆಚ್ಚಗಳಿಗೆ ಮುಂಗಡ ಮಂಜೂರಾತಿ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ :ಸಾ.ಸ.5:5 (2023)

ವಿಷಯ: ಫೆಬ್ರವರಿ / ಮಾರ್ಚ್ 2023ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅವ್ಯವಹಾರ ನಡೆಸಿದ ವಿದ್ಯಾರ್ಥಿಗಳ ಬಗ್ಗೆ ತನಿಖಾ ವರದಿ.

ನಿರ್ಣಯ: ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ :ಸಾ.ಸ.5:6 (2023)

ವಿಷಯ: ಆಳ್ವಾಸ್ ಕಾಲೇಜು, ಮೂಡಬಿದಿರೆ ಇಲ್ಲಿರುವ ಸ್ನಾತಕೋತ್ತರ ಸಮಾಜಕಾರ್ಯ ಮತ್ತು ಸಸ್ಯಶಾಸ್ತ್ರ ವಿಭಾಗಗಳಿಗೆ ಪಿಹೆಚ್.ಡಿ. ವ್ಯಾಸಂಗದ ಸಂಶೋಧನಾ ಕೇಂದ್ರವನ್ನಾಗಿ ಮಾನ್ಯತೆ ನೀಡುವ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಸಮಿತಿಯು ಸಲ್ಲಿಸಿರುವ ವರದಿಯಲ್ಲಿ ಸ್ಪಷ್ಟತೆ ಇಲ್ಲದಿರುವುದರಿಂದ ಈ ಬಗ್ಗೆ ಹೊಸ ಸಮಿತಿ ರಚಿಸಿ, ಕಾಲೇಜಿಗೆ ಪುನಃ ಭೇಟಿ ನೀಡಿ ವಿಭಾಗವಾರು ವಿವರವಾದ ವರದಿಯನ್ನು ಸಲ್ಲಿಸಲು ಕ್ರಮ ಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ :ಸಾ.ಸ.5:7 (2023)

ವಿಷಯ: Financial Education & Investment Awareness, ಕೌಶಲ್ಯವರ್ಧಕ ಕೋರ್ಸಿಗೆ ನೋಂದಣಿಯಾದ ವಿದ್ಯಾರ್ಥಿಗಳಿಗೆ ವಿಧಿಸಿರುವ ಶುಲ್ಕದ ಪಾವತಿ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಚರ್ಚಿಸಲಾಯಿತು. ಶೈಕ್ಷಣಿಕ ವರ್ಷ 2022-23ನೇ ಸಾಲಿನಲ್ಲಿ NSE Academy ವತಿಯಿಂದ ವಿದ್ಯಾರ್ಥಿಗಳಿಗೆ ಯಾವುದೇ ನೇರ ಬೋಧನೆ ಅಥವಾ ಇತರ ಸೇವೆಗಳು ದೊರಕಿರುವುದಿಲ್ಲವಾದುದರಿಂದ ಸದರಿಯವರು ನಮೂದಿಸಿರುವ ಮೊತ್ತ ಪಾವತಿಸುವ ಮೊದಲು ನೀಡಿರುವ ಸೇವೆಯ ಬಗ್ಗೆ ಮತ್ತು ಮುಂದಕ್ಕೆ ನೀಡುವ ಸೇವೆಯ ಬಗ್ಗೆ ಸ್ಪಷ್ಟ ಮಾಹಿತಿ ನೀಡಲು Academy ಯ ಅಧಿಕೃತ ಪ್ರತಿನಿಧಿಯು ಮುಂದಿನ ಸಿಂಡಿಕೇಟು ಸಭೆಯಲ್ಲಿ ಹಾಜರಾಗಿ ಸಭೆಗೆ ಮಾಹಿತಿಯನ್ನು ನೀಡಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಕಾರ್ಯಸೂಚಿ ಸಂಖ್ಯೆ: ಆಡಳಿತ :ಸಾ.ಸ.5:8 (2023)

ವಿಷಯ: ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತಾತ್ಕಾಲಿಕ ನೆಲೆಯ ಸಿಬ್ಬಂದಿಗಳಿಗೆ ಪ್ರಯಾಣಭತ್ಯೆ / ದಿನಭತ್ಯೆಯನ್ನು ಮರು ನಿಗದಿಪಡಿಸುವ ಬಗ್ಗೆ.

ನಿರ್ಣಯ: ಪ್ರಯಾಣ ಭತ್ಯೆಯನ್ನು ಪ್ರತಿ ಕಿಲೋ ಮೀಟರ್‌ಗೆ ರೂ.2.00ರಂತೆ ಹಾಗೂ ದಿನಭತ್ಯೆಯನ್ನು ಗ್ರೂಪ್ 'ಸಿ' ಸಿಬ್ಬಂದಿಗಳಿಗೆ ರೂ.300.00 ಹಾಗೂ ಗ್ರೂಪ್ 'ಡಿ' ಸಿಬ್ಬಂದಿಗಳಿಗೆ ರೂ.200.00 ರಂತೆ ನಿಗದಿಪಡಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ :ಸಾ.ಸ.5:9 (2023)

ವಿಷಯ: ಡಾ. ಅಂಬ್ರೇಶ್ ಪ್ರಭಾಕರ ಅಂಬಲಗಿ, ಸಹಾಯಕ ಪ್ರಾಧ್ಯಾಪಕರು, ಎಲೆಕ್ಟ್ರಾನಿಕ್ಸ್ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರ ಅಂತರ್ ವಿಶ್ವವಿದ್ಯಾನಿಲಯ ವರ್ಗಾವಣೆ - ವಿಶ್ವವಿದ್ಯಾನಿಲಯದ ಸೇವೆಯಿಂದ ಬಿಡುಗಡೆಗೊಳಿಸುವ ಹಾಗೂ ಸಹಾಯಕ ಪ್ರಾಧ್ಯಾಪಕರ ಹುದ್ದೆಯ ಹಕ್ಕು ಸ್ವಾಮ್ಯವನ್ನು ಎರಡು ವರ್ಷಗಳವರೆಗೆ ಕಾಯ್ದಿರಿಸುವ ಕುರಿತು.

ನಿರ್ಣಯ: ಡಾ. ಅಂಬ್ರೇಶ್ ಪ್ರಭಾಕರ ಅಂಬಲಗಿ ಇವರಿಗೆ ಸಹಾಯಕ ಪ್ರಾಧ್ಯಾಪಕರ ಹುದ್ದೆಯಲ್ಲಿ ಆರು ತಿಂಗಳ ಅವಧಿಗೆ ಹಕ್ಕು ಸ್ವಾಮ್ಯವನ್ನು ಕಾಯ್ದಿರಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು :ಸಾ.ಸ.5:10(2023)

ವಿಷಯ: ಪದವಿ ಮಟ್ಟದ ಆಧುನಿಕ ಯುರೋಪಿಯನ್ ಭಾಷಾ ಅಧ್ಯಯನ ಮಂಡಳಿ (UG BOS IN MODERN EUROPEAN LANGUAGE) ಯನ್ನುಪುನರ್ರಚಿಸುವ ಬಗ್ಗೆ.

ನಿರ್ಣಯ: ಪದವಿ ಮಟ್ಟದ ಆಧುನಿಕ ಯುರೋಪಿಯನ್ ಭಾಷಾ ಅಧ್ಯಯನ ಮಂಡಳಿ (UG BOS IN MODERN EUROPEAN LANGUAGE) ಯನ್ನುಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ :ಸಾ.ಸ.5:11 (2023)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರು (ಆಡಳಿತ) ಹುದ್ದೆಗೆ ನೇಮಕಾತಿ ಬಗ್ಗೆ.

ನಿರ್ಣಯ: ಗಮನಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ :ಸಾ.ಸ.5:12(2023)

ವಿಷಯ: 2023ನೇ ಸಾಲಿನ ಪದವಿ / ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಬೇಕಾದ ಉತ್ತರ ಪತ್ರಿಕೆಗಳನ್ನು ವಿದ್ಯುನ್ಮಾನ ಸಂಗ್ರಹಣ ವಿಧಾನದ ಇ-ಟೆಂಡರು ಮೂಲಕ ಖರೀದಿಸುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು :ಸಾ.ಸ.5:13(2023)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಸ್ತುವಿಜ್ಞಾನ ವಿಭಾಗಕ್ಕೆ ಅಧ್ಯಕ್ಷರ ನೇಮಕಾತಿ ಬಗ್ಗೆ.

ನಿರ್ಣಯ: ದಿನಾಂಕ 01.10.2023ರಿಂದ ಅನ್ವಯವಾಗುವಂತೆ ಸ್ನಾತಕೋತ್ತರ ವಸ್ತುವಿಜ್ಞಾನ ಅಧ್ಯಯನ ವಿಭಾಗಕ್ಕೆ ಡಾ. ರಾಣಿ ಎಂ. ಪಟ್ಟಾಭಿ, ಇವರನ್ನು ಅಧ್ಯಕ್ಷರನ್ನಾಗಿ ನೇಮಕಾತಿ ಮಾಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ :ಸಾ.ಸ.5:14(2023)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ/ಹೊರಗುತ್ತಿಗೆ ನೆಲೆಯಲ್ಲಿ ಬೋಧಕೇತರ ಸಿಬ್ಬಂದಿಗಳನ್ನು ಬಳಸಿಕೊಂಡಿರುವ ಕ್ರಮಕ್ಕೆ ಸರಕಾರದಿಂದ ಸ್ವೀಕೃತವಾಗಿರುವ ಪತ್ರದ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ವಿಸ್ತೃತವಾಗಿ ಚರ್ಚಿಸಲಾಯಿತು.

ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ / ಹೊರಗುತ್ತಿಗೆ ನೆಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆಯನ್ನು ತರ್ಕಬದ್ಧಗೊಳಿಸಲು (Rationalize) ಸಮಿತಿಯನ್ನು ರಚಿಸಿ, ಸದರಿ ಸಮಿತಿಗೆ ಕುಲಸಚಿವರು (ಆಡಳಿತ) ಇವರನ್ನು ಸಂಚಾಲಕರನ್ನಾಗಿ ನೇಮಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಮುಂದುವರಿದು, ಪ್ರತಿ ಘಟಕ ಕಾಲೇಜುಗಳು ಮತ್ತು ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಅಧ್ಯಯನ ಕೇಂದ್ರಗಳು, ಆಡಳಿತ ವಿಭಾಗ/ಇಲಾಖೆ ಇತ್ಯಾದಿಗಳಿಂದ ತಮ್ಮ ಕಛೇರಿಗೆ ಅಗತ್ಯವಿರುವ ಕನಿಷ್ಟ ಬೋಧಕೇತರ ಸಿಬ್ಬಂದಿಗಳ ವರದಿಯನ್ನು ಪಡೆಯಬೇಕೆಂಬುದಾಗಿಯೂ ಸಿಂಡಿಕೇಟು ನಿರ್ಣಯಿಸಿತು.

ಕಾರ್ಯಸೂಚಿ ಸಂಖ್ಯೆ: ಆಡಳಿತ :ಸಾ.ಸ.5:15(2023)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟು, ಶೈಕ್ಷಣಿಕ ಮಂಡಳಿ, ವಿವಿಧ ಪ್ರಾಧಿಕಾರಗಳು ಮತ್ತು ಸಮಿತಿ ಸಭೆಗಳಿಗೆ ಹಾಜರಾಗುವ ಸರಕಾರಿ ಸೇವೆಯಲ್ಲಿರುವ ಸದಸ್ಯರುಗಳಿಗೆ ನೀಡಲಾಗುವ ಪ್ರಯಾಣ ಭತ್ಯೆ ಮತ್ತು ಉಪಸ್ಥಿತಿ ಭತ್ಯೆಯ ಬಗ್ಗೆ.

ನಿರ್ಣಯ: ಸರಕಾರಿ ಸೇವೆಯಲ್ಲಿರುವ ಸದಸ್ಯರುಗಳಿಗೆ ನೀಡಲಾಗುವ ಪ್ರಯಾಣ ಭತ್ಯೆ ಮತ್ತು ಉಪಸ್ಥಿತಿ ಭತ್ಯೆಯ ಕುರಿತು ಹೊಸ ಪರಿನಿಯಮವನ್ನು ರಚಿಸಿ ವಿಶ್ವವಿದ್ಯಾನಿಲಯದ ಸಂಬಂಧಿತ ಪ್ರಾಧಿಕಾರಗಳಿಂದ ಮತ್ತು ಸರಕಾರದಿಂದ ಅನುಮೋದನೆ ಪಡೆದುಕೊಂಡು ಜಾರಿಗೊಳಿಸಲು ಕ್ರಮಕೈಗೊಳ್ಳಬೇಕೆಂದು ಸಿಂಡಿಕೇಟು ನಿರ್ಣಯಿಸಿತು.

ಈ ಬಗ್ಗೆ ರಾಜ್ಯದ ಇತರೇ ವಿಶ್ವವಿದ್ಯಾನಿಲಯಗಳಿಂದ ಮಾಹಿತಿ ಪಡೆದು ಸದರಿ ಮಾಹಿತಿಯನ್ನು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ಕ್ರಮ ಕೈಗೊಳ್ಳಬೇಕೆಂಬುದಾಗಿಯೂ ಸಿಂಡಿಕೇಟು ನಿರ್ಣಯಿಸಿತು.

ಕಾರ್ಯಸೂಚಿ ಸಂಖ್ಯೆ: ಆಡಳಿತ :ಸಾ.ಸ.5:16(2023)

ವಿಷಯ: ಕಾಮಾಕ್ಷಿ ಆಸ್ಪತ್ರೆ, ಕುವೆಂಪುನಗರ, ಮೈಸೂರು ಈ ಆಸ್ಪತ್ರೆಯನ್ನು ವೈದ್ಯಕೀಯ ವೆಚ್ಚ ಮರುಭರಣೆಗೆ ಮಂಗಳೂರು ವಿಶ್ವವಿದ್ಯಾನಿಲಯ ಪರಿಗಣಿಸಿದ ಆಸ್ಪತ್ರೆಗಳ ಪಟ್ಟಿಯಲ್ಲಿ ಸೇರಿಸುವ ಬಗ್ಗೆ ಹಾಗೂ ಶ್ರೀ ಪ್ರಕಾಶ್ ಎಂ., ಸಹಾಯಕ ಪ್ರಾಧ್ಯಾಪಕರು ಇವರ ಪತ್ನಿಯ ವೈದ್ಯಕೀಯ ವೆಚ್ಚದ ಮರುಭರಣೆ ಬಗ್ಗೆ.

ನಿರ್ಣಯ: ಕಾಮಾಕ್ಷಿ ಆಸ್ಪತ್ರೆ, ಕುವೆಂಪುನಗರ, ಮೈಸೂರು ಎಂಬ ಆಸ್ಪತ್ರೆಯನ್ನು ಮಂಗಳೂರು ವಿಶ್ವವಿದ್ಯಾನಿಲಯ ಪರಿಗಣಿಸಿದ ಆಸ್ಪತ್ರೆಗಳ ಪಟ್ಟಿಯಲ್ಲಿ ಸೇರಿಸಿಕೊಂಡು ಶ್ರೀ ಪ್ರಕಾಶ್ ಎಂ., ಸಹಾಯಕ ಪ್ರಾಧ್ಯಾಪಕರು ಇವರ ಪತ್ನಿಯ ವೈದ್ಯಕೀಯ ವೆಚ್ಚ ರೂ.40,767.00 (ರೂಪಾಯಿ ನಲವತ್ತು ಸಾವಿರದ ಏಳು ನೂರ ಅರವತ್ತೇಳು ಮಾತ್ರ) ನ್ನು ಪಾವತಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಆಡಳಿತ :ಸಾ.ಸ.5:17(2023)

ವಿಷಯ: ಸುಶ್ರುತ ಕಣ್ಣಿನ ಆಸ್ಪತ್ರೆ, ನಂ. 313, ದೀವನ್ಸ್ ರಸ್ತೆ, ಮೈಸೂರು-570024 ಈ ಆಸ್ಪತ್ರೆಯನ್ನು ವೈದ್ಯಕೀಯ ವೆಚ್ಚ ಮರುಭರಣೆಗೆ ಮಂಗಳೂರು ವಿಶ್ವವಿದ್ಯಾನಿಲಯ ಪರಿಗಣಿಸಿದ ಆಸ್ಪತ್ರೆಗಳ ಪಟ್ಟಿಯಲ್ಲಿ ಸೇರಿಸುವ ಬಗ್ಗೆ ಹಾಗೂ ಡಾ. ಆರ್. ನಿರ್ಮಲ, ಸಹಾಯಕ ಪ್ರಾಧ್ಯಾಪಕರು ಇವರ ತಂದೆಯ ವೈದ್ಯಕೀಯ ವೆಚ್ಚದ ಮರುಭರಣೆ ಬಗ್ಗೆ.

| | |
|---|---|
| ನಿರ್ಣಯ: | ಸುಶ್ರುತ ಕಣ್ಣಿನ ಆಸ್ಪತ್ರೆ, ನಂ. 313, ದೀವನ್ಸ್ ರಸ್ತೆ, ಮೈಸೂರು-570024 ಎಂಬ ಆಸ್ಪತ್ರೆಯನ್ನು ಮಂಗಳೂರು ವಿಶ್ವವಿದ್ಯಾನಿಲಯ ಪರಿಗಣಿಸಿದ ಆಸ್ಪತ್ರೆಗಳ ಪಟ್ಟಿಯಲ್ಲಿ ಸೇರಿಸಿಕೊಂಡು ಡಾ. ಆರ್. ನಿರ್ಮಲ, ಸಹಾಯಕ ಪ್ರಾಧ್ಯಾಪಕರು ಇವರ ತಂದೆಯ ವೈದ್ಯಕೀಯ ವೆಚ್ಚ ರೂ.13,008.00 (ರೂಪಾಯಿ ಹದಿಮೂರು ಸಾವಿರದ ಎಂಟು ಮಾತ್ರ) ನ್ನು ಪಾವತಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. |
| | |
| ಕಾರ್ಯಸೂಚಿ ಸಂಖ್ಯೆ: | ಡಿಇವಿ :ಸಾ.ಸ.5:18 (2023) |
| ವಿಷಯ: | National Institute of Radiological Sciences (NRIS), National Institute for Quantum and Radiological Science and Technology, Anagawalnage-ku, Chiba-shi, Chiba, Japan ಇವರೊಂದಿಗೆ ಒಡಂಬಡಿಕೆ ಅವಧಿಯನ್ನು ಮುಂದುವರಿಸುವ ಬಗ್ಗೆ. |
| ನಿರ್ಣಯ: | ಅನುಮೋದಿಸಲಾಯಿತು. |
| | |
| ಕಾರ್ಯಸೂಚಿ ಸಂಖ್ಯೆ: | ಸಾರ್ವತ್ರಿಕ :ಸಾ.ಸ.5:19 (2023) |
| ವಿಷಯ: | ವಸತಿ ನಿಲಯಗಳ ಸಲಹಾ ಸಮಿತಿ ಸಭೆಯ ನಡವಳಿಯ ಬಗ್ಗೆ. |
| ನಿರ್ಣಯ: | ವಸತಿ ಗೃಹಗಳ ಶುಲ್ಕಗಳಲ್ಲಿ ನಮೂದಿಸಿರುವ Service Charges ಶುಲ್ಕವನ್ನು ರೂ.400.00 (ರೂಪಾಯಿ ನಾಲ್ಕು ನೂರು ಮಾತ್ರ) ಎಂದು ಪರಿಷ್ಕರಿಸಿ, ನಡವಳಿಯನ್ನು ಅನುಮೋದಿಸಲಾಯಿತು. |
| | |
| ಕಾರ್ಯಸೂಚಿ ಸಂಖ್ಯೆ: | ಎಸಿಸಿ :ಸಾ.ಸ.5:20(2023) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ ಅರ್ಹ ಸಂಯೋಜಿತ ಕಾಲೇಜುಗಳಿಗೆ ಸ್ವಾಯತ್ತ ಸ್ಥಾನಮಾನ ನೀಡುವುದಕ್ಕೆ ಸಂಬಂಧಿಸಿದಂತೆ ಸ್ಥಾಯಿಸಮಿತಿ ರಚನೆ ಬಗ್ಗೆ. |
| ನಿರ್ಣಯ: | ಸಮಿತಿಯನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು. |
| | |
| ಕಾರ್ಯಸೂಚಿ ಸಂಖ್ಯೆ: | ಎಸಿಸಿ :ಸಾ.ಸ.5:21(2023) |
| ವಿಷಯ: | ಸ್ಕೂಲ್ ಆಫ್ ಸೋಷಿಯಲ್ ವರ್ಕ್, ರೋಶನಿನಿಲಯ (ಸ್ವಾಯತ್ತ), ಮಂಗಳೂರು ಇಲ್ಲಿನ ಸ್ನಾತಕೋತ್ತರ ಕಾರ್ಯಕ್ರಮಕ್ಕೆ 10 ಹೆಚ್ಚುವರಿ ವಿದ್ಯಾರ್ಥಿ ಪರಿಮಿತಿ ನೀಡುವ ಬಗ್ಗೆ. |
| ನಿರ್ಣಯ: | ಅನುಮೋದಿಸಲಾಯಿತು. |

ಕಾರ್ಯಸೂಚಿ ಸಂಖ್ಯೆ: ಎಸಿಸಿ :ಸಾ.ಸ.5:22(2023)

ವಿಷಯ: ಶೈಕ್ಷಣಿಕ ವರ್ಷ 2023-24ನೇ ಸಾಲಿಗೆ ವಿವಿಧ ಶುಲ್ಕಗಳನ್ನು ನಿಗದಿಪಡಿಸುವ ಬಗ್ಗೆ.

ನಿರ್ಣಯ: Enquiries from Govt./Quasi Govt. Organizations/Indian Embasy/Private Agencies ಗೆ ನಿಗದಿಪಡಿಸಿರುವ ಶುಲ್ಕವನ್ನು ರೂ.5,000.00 (ರೂಪಾಯಿ ಐದು ಸಾವಿರ ಮಾತ್ರ) ಮತ್ತು Verification of Marks card **(Per marks card)** ರೂ.500.00 (ರೂಪಾಯಿ ಐದು ನೂರು ಮಾತ್ರ) ಎಂಬುದಾಗಿ ಹಾಗೂ ಶುಲ್ಕ ತಃಖ್ತೆಯ ಕ್ರಮ ಸಂಖ್ಯೆ 11. Examinations fee ರಡಿಯ ಕ್ರಮ ಸಂಖ್ಯೆ II Details of fee to be charged for services pertaining to the University Examinations ನ ಕಲಂ 4ರ Photo copy answer script 400.00 (per script) (ರೂಪಾಯಿ ನಾಲ್ಕು ನೂರು ಮಾತ್ರ) ಎಂದು ಪರಿಷ್ಕರಿಸಿ, ಉಳಿದಂತೆ ಶುಲ್ಕ ಪರಿಷ್ಕರಣಾ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ :ಸಾ.ಸ.5:23(2023)

ವಿಷಯ: ಡಾ. ಅನಿತಾ ರವಿಶಂಕರ್, ನಿವೃತ್ತ ಸಹ ಪ್ರಾಧ್ಯಾಪಕರು ಇವರ ಪಿಂಚಣಿ ಸೌಲಭ್ಯಗಳ ಕುರಿತು.

ನಿರ್ಣಯ: ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಸದರಿಯವರಿಗೆ 80% ತಾತ್ಕಾಲಿಕ ಪಿಂಚಣಿಯನ್ನು ಮಂಜೂರು ಮಾಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಗಳಿಕೆ ರಜೆ ಹಾಗೂ ಉಳಿದ ಪಿಂಚಣಿ ಸೌಲಭ್ಯಗಳನ್ನು ನ್ಯಾಯಾಲಯದಿಂದ ಪ್ರಕರಣ ಇತ್ಯರ್ಥವಾಗುವವರೆಗೆ ತಡೆಹಿಡಿಯಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಕಾರ್ಯಸೂಚಿ ಸಂಖ್ಯೆ: ಸಾರ್ವತ್ರಿಕ :ಸಾ.ಸ.5:24(2023)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿಗಳ ಸೇವೆಯನ್ನು ಪಡೆದುಕೊಂಡಿರುವ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ವಿಸ್ತೃತವಾಗಿ ಚರ್ಚಿಸಲಾಯಿತು. ಮುಂದಿನ ನಿರ್ಣಯವನ್ನು ಕೈಗೊಳ್ಳಲು ಶ್ರೀ ರಂಗನಾಥ್ ಎಂಟರ್‌ಪ್ರೈಸಸ್‌ನ ಅಧಿಕೃತ ಪ್ರತಿನಿಧಿಯು ವಿಶ್ವವಿದ್ಯಾನಿಲಯದೊಂದಿಗೆ ಮಾತುಕತೆ ನಡೆಸಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಹೆಚ್ಚುವರಿ ಶುಲ್ಕವಿಲ್ಲದೆ ಪ್ರಸ್ತುತ ಇರುವ ಸೇವೆಯನ್ನು ಮುಂದುವರಿಸಲು ಕ್ರಮಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಇತರ ವಿಷಯಗಳು:**

1. ಮಂಗಳೂರು ವಿಶ್ವವಿದ್ಯಾನಿಲಯದಿಂದ ಕ್ರೀಡಾ ಚಟುವಟಿಕೆಗಳಿಗೆ ಸಂಬಂಧಪಟ್ಟ ಖರ್ಚುವೆಚ್ಚಗಳಿಗೆ CSR ಅನುದಾನ ಪಡೆದುಕೊಳ್ಳುವಂತೆ ಕ್ರಮವಹಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.
2. ಮಂಗಳೂರು ವಿಶ್ವವಿದ್ಯಾನಿಲಯದ ಪರೀಕ್ಷಾ ಅವ್ಯವಹಾರಗಳನ್ನು ನಿಯಂತ್ರಿಸುವ ಆರ್ಡಿನೆನ್ಸ್ ನಲ್ಲಿ ದಂಡನೆ ಜೊತೆಗೆ ರೂ.1,000.00 -ರೂ.5,000.00 ವರೆಗೆ ದಂಡ ಶುಲ್ಕವನ್ನು ವಿಧಿಸಲು ಅವಕಾಶ ಕಲ್ಪಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.
3. ಬೋಧಕೇತರ ಸಿಬ್ಬಂದಿಗಳ ಮುಂಭಡ್ತಿಗೆ ಸಂಬಂಧಿಸಿದಂತೆ, ಈ ಹಿಂದಿನ ಸಿಂಡಿಕೇಟು ಸಭೆಗಳಲ್ಲಿ ಕೈಗೊಂಡಿರುವ ನಿರ್ಣಯಗಳಂತೆ, ಮುಂಭಡ್ತಿಗಳನ್ನು ಪರಿಶೀಲಿಸಲು (Review) ಸಮಾಜ ಕಲ್ಯಾಣ ಇಲಾಖೆ ಹಾಗೂ ಇತರೇ ತಜ್ಞರನ್ನೊಳಗೊಂಡ ಸಮಿತಿಯನ್ನು ಕೂಡಲೇ ರಚಿಸಿಕೊಂಡು, ವರದಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಬಳಿಕ ಸದರಿ ವರದಿಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ಸಲ್ಲಿಸಿ, ಅನುಮೋದನೆ ಪಡೆಯಲು ಕ್ರಮ ಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.
4. ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ಪ್ರೊ. ಸೋಮಣ್ಣ ಹೆಚ್., ಇವರನ್ನು ದಿನಾಂಕ 01.07.2023 ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನೇಮಕಾತಿ ಮಾಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಕುಲಸಚಿವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/- | ಸಹಿ/- |
| ಕುಲಸಚಿವರು | ಕುಲಪತಿಗಳು. |